ಓಃಎಸ್ಃನಂ.*234/2015*

ಪಿ.ಡಬ್ಲ್ಯೂ- *1*

**ದಿಃ *23-09-2021* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಟಿ ಎನ್ ಎಂ ವಕೀಲರಿಂದ**

ದಾವ ಸ್ವತ್ತನ್ನು ನಾನು ದಿಃ *03-09-2010* ರಂದು ಸಾವಿತ್ರಮ್ಮರವರಿಂದ ಖರೀದಿಸಿರುತ್ತೇನೆ ಎಂದರೆ ಸರಿ. ನಾನು ಖರೀದಿಸಿದಾಗ ದಾವ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ *66*ನೇ ನಿವೇಶನ ಪಶ್ಚಿಮಕ್ಕೆಃ *64, 65*ನೇ ನಿವೇಶನ ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆಃ ನಿವೇಶನ ಸಂಖ್ಯೆ *42* ಇದ್ದು, ದಕ್ಷಿಣ ಭಾಗದ ಚೆಕ್ಕುಬಂದಿ ತಪ್ಪಾಗಿದ್ದರಿಂದ ಎರಡು ವರ್ಷದ ನಂತರ ಸದರಿ ಚಕ್ಕುಬಂದಿಯನ್ನು ನಿವೇಶನ ಸಂಖ್ಯೆ *43* ಎಂದು ತಿದ್ದುಪಡಿ ಮಾಡಿಸಿರುತ್ತೇನೆ. ಸದರಿ ತಿದ್ದುಪಡಿ ಪತ್ರವನ್ನು ಸಾವಿತ್ರಮ್ಮನವರಿಂದ ಬರೆಸಿಕೊಂಡಿರುತ್ತೇನೆ. ಸದರಿ ಸ್ವತ್ತನ್ನು ಸಾವಿತ್ರಮ್ಮನವರು ದಿಃ *04-01-1981* ರಂದು ನೀಲಪ್ಪನವರಿಂದ ಖರೀದಿಸಿದ್ದರು ಎಂದರೆ ಸರಿ. ಸಾವಿತ್ರಮ್ಮನವರು ಸ್ವತ್ತನ್ನು ಕೊಂಡಾಗ ದಕ್ಷಿಣ ಭಾಗಕ್ಕೆ ನಿವೇಶನ ಸಂಖ್ಯೆ *42* ಎಂದು ಇತ್ತು ಎಂದರೆ ನನಗೆ ಗೊತ್ತಿಲ್ಲ. ಸಾವಿತ್ರಮ್ಮನವರ ಕ್ರಯಪತ್ರದಲ್ಲಿ ಸದರಿ ತಿದ್ದುಪಡಿ ಆಗಿಲ್ಲ ಎಂದರೆ ಸರಿ. ನಾವು ಖರೀದಿಸಿದ ಎರಡು ವರ್ಷದ ನಂತರ ನಾವು ಕಂದಾಯ ಕಟ್ಟಲು ಹೋದಾಗ ಚಕ್ಕುಬಂದಿ ತಪ್ಪಾಗಿರುವ ಬಗ್ಗೆ ಗೊತ್ತಾಗಿರುತ್ತದೆ. ಚಕ್ಕುಬಂದಿ ತಪ್ಪಾಗಿರುವ ಬಗ್ಗೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ದಾವ ಸ್ವತ್ತಿನ ಸ್ವಾಧೀನವನ್ನು ಖರೀದಿಸಿದ ದಿನವೇ ಸಾವಿತ್ರಮ್ಮನವರಿಂದ ನಾನು ಪಡೆದು, ತಂತಿ ಬೇಲಿ ಹಾಕಿರುತ್ತೇನೆ.

ಕಂದಾಯ ರಸೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವ ಸ್ವತ್ತಿನ ಅಸಸ್ ಮೆಂಟ್ ಸಂಖ್ಯೆ *4951* ಆಗಿರುತ್ತದೆ. ನಿವೇಶನ ಸಂಖ್ಯೆ *64, 65* ಆಗಿರುತ್ತದೆ. ಸಾವಿತ್ರಮ್ಮ ಖರೀದಿಸಿದ ನಿವೇಶನ ಸಂಖ್ಯೆ *65* ಇರಬಹುದು, ಅಸಸ್ ಮೆಂಟ್ ಸಂಖ್ಯೆ ಗೊತ್ತಿಲ್ಲ. ನಾವು ಖರೀದಿ ಮಾಡುವಾಗ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿರುತ್ತೇವೆ. ಸಾವಿತ್ರಮ್ಮನವರ ಹೆಸರಿನಲ್ಲಿರುವ ಎಲ್ಲಾ ದಾಖಲೆಗಳನ್ನು ಉದ್ದೇಶಪೂರ್ವಕವಾಗಿ ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ಸಲ್ಲಿಸುತ್ತೇನೆಂದು ನುಡಿಯುತ್ತಾರೆ. ಪ್ರತಿವಾದಿ ಈಗ್ಗೆ *6-7* ವರ್ಷಗಳಿಂದ ಪರಿಚಯವಿರುತ್ತಾರೆ. ಪ್ರತಿವಾದಿಯು ತನ್ನ ಸ್ವತ್ತನ್ನು ದಿಃ *20-09-2001* ರಲ್ಲಿ ಖರೀದಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅವರ ಸ್ವತ್ತಿನಲ್ಲಿ ಪ್ರತಿವಾದಿಯರು ಆರ್ ಸಿ ಸಿ ಮನೆಯನ್ನು ಕಟ್ಟಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಿವೇಶನ ಸಂಖ್ಯೆ *65* ರಲ್ಲಿ ಆರ್ ಸಿ ಸಿ ಕಟ್ಟಿರುತ್ತಾರೆಂದು ನುಡಿಯುತ್ತಾರೆ. ಸದರಿ ಮನೆಯನ್ನು *2008-09* ರಲ್ಲಿ ಕಟ್ಟಿರುತ್ತಾರೆಂದರೆ ಸರಿಯಲ್ಲ. ಮನೆ ಕಟ್ಟಲು ಪ್ರತಿವಾದಿ ಬ್ಯಾಂಕಿನಿಂದ ಸಾಲ ಪಡೆದಿದ್ದಾರೆಂದರೆ ಸಾಕ್ಷಿಯು ನಿವೇಶನ ಸಂಖ್ಯೆ *66* ಕ್ಕೆ ಪಡೆದಿರುತ್ತಾರೆಂದು ನುಡಿಯುತ್ತಾರೆ. ಪ್ರತಿವಾದಿಗೆ ಕಟ್ಟಡ ಪರವಾನಿಗೆ ಪಡೆದಿರುತ್ತಾರೆಂದರೆ ಸಾಕ್ಷಿಯು ನಿವೇಶನ *66* ಕ್ಕೆ ಪಡೆದಿರುತ್ತಾರೆಂದು ನುಡಿಯುತ್ತಾರೆ. ಜಯಣ್ಣನವರು ನೀಡಿದ ಅರ್ಜಿಯ ಮೇರೆಗೆ ಮುನಿಸಿಪಾಲಿಟಿಯವರು ನಿವೇಶನಗಳನ್ನು ನನಗೆ ನೋಟೀಸು ನೀಡಿ ಅಳತೆ ಮಾಡಿರುತ್ತಾರೆಂದರೆ ಸರಿಯಲ್ಲ. ನಮ್ಮ ಮತ್ತು ಪ್ರತಿವಾದಿಗೆ ದಾಖಲೆಗಳನ್ನು ಪರಿಶೀಲಿಸಿ ಅಳತೆ ಮಾಡಿರುತ್ತಾರೆಂದರೆ ಸರಿಯಲ್ಲ. ಅಳತೆ ಮಾಡಿದ ನಂತರ ಪ್ರತಿವಾದಿಯು *15* ಲಕ್ಷ ಖರ್ಚು ಮಾಡಿ ಮನೆ

ಕಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ಸದರಿ ಮನೆ *40* ಲಕ್ಷ ಬಾಳುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆಯನ್ನು ಒಂದು ವರ್ಷ ಕಾಲ ಕಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಮನೆಯ ಪಾಯ ತೆಗೆಯುವಾಗ ನಾನು ಹಾಜರಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ಅದಕ್ಕೆ ತಕರಾರು ಮಾಡಿದ್ದು, ಅವರು ನನಗೆ ಹೊಡೆಯಲು ಬಂದಾಗ ದಾವೆ ಸಲ್ಲಿಸಿರುತ್ತೇನೆಂದು ನುಡಿಯುತ್ತಾರೆ. ನಾನು ಪ್ರತಿವಾದಿಯರ ವಿರುದ್ದ ಪೊಲೀಸ್ ದೂರು ನೀಡಿರುವುದಿಲ್ಲ. ನಾನು ಗೃಹಪ್ರವೇಶಕ್ಕೆ ಹೋಗಿದ್ದೆ ಎಂದರೆ ಸರಿಯಲ್ಲ. ಆದರೆ ಆ ವಿಚಾರ ಗೊತ್ತಿತ್ತು ಎಂದರೆ ಸರಿ.

ಗೃಹಪ್ರವೇಶ ಆದ ಮೂರು ವರ್ಷದ ನಂತರ ನಾನು ಪ್ರತಿವಾದಿಗೆ ನೋಟೀಸು ನೀಡಿರುತ್ತೇನೆಂದರೆ ನನಗೆ ಗೊತ್ತಿಲ್ಲ. ಸದರಿ ಮನೆಯ ಸ್ವತ್ತಿನ ದಾಖಲೆಗಳು ಪ್ರತಿವಾದಿಯ ಹೆಸರಿನಲ್ಲಿವೆ ಎಂದರೆ ಸರಿಯಲ್ಲ. ನಾನು ದಾವ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿಯೇ ಪ್ರತಿವಾದಿಯರು ಅವರು ಸ್ವತ್ತನ್ನು ಖರೀದಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ದಾವ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿಯೇ ಪ್ರತಿವಾದಿಯರು ಅವರ ಸ್ವತ್ತನಲ್ಲಿ ಮನೆ ಕಟ್ಟಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯರು ಕಾನೂನು ಪ್ರಕಾರವಾಗಿ ಪರವಾನಿಗೆ ಪಡೆದು ಅವರ ಜಾಗದಲ್ಲಿ ಮನೆ ಕಟ್ಟಿರುತ್ತಾರೆಂದರೆ ಸರಿಯಲ್ಲ. ನಾನು ದಾವ ಸ್ವತ್ತಿನ ಸ್ವಾಧೀನವನ್ನು ಅದರ ಹಿಂದಿನ ಮಾಲೀಕರಿಂದ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿಸಿದಾಗ ದಾವ ಸ್ವತ್ತು ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿಸುವ ಮುಂಚೆ ದಾವ ಸ್ವತ್ತಿನ ಮಾಹಿತಿ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ದಕ್ಷಿಣ ಭಾಗದ ಚಕ್ಕುಬಂದಿಯ ಬಗ್ಗೆ ಸರಿಯಾದ ಮಾಹಿತಿ ಪಡೆಯದೆ, ದಾಖಲಾತಿ ಪರಿಶೀಲನೆ ಮಾಡದೆ ಕ್ರಯಪತ್ರ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಖರೀದಿಸಿರುವ ಸ್ವತ್ತಿಗೂ, ಪ್ರತಿವಾದಿಯರ ಸ್ವತ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ತಿದ್ದುಪಡಿ ಕ್ರಯಪತ್ರ ಕಾನೂನುಬಾಹಿರವಾಗಿದೆ ಎಂದರೆ ಸರಿಯಲ್ಲ. ಸಾವಿತ್ರಮ್ಮ ನನಗೆ ತಂಗಿಯಾಗಬೇಕು. ನಾನೇ ಹೇಳಿ ತಿದ್ದುಪಡಿ ಪತ್ರ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಪ್ರತಿವಾದಿಯರು ಏನು ಕೆಲಸ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ಅಕ್ರಮವಾಗಿ ಸ್ವತ್ತನ್ನು ಪಡೆಯಲು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ಮೋಸ ಮಾಡಲು ಮತ್ತು ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)*

*ಓ. ಕೇ. ಸ. ಇ. ಎ. ಒ.*

Sd/-

*ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು*

***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***